International Journal of Kannada Research 2018; 4(4): 89-90

International Journal of Kannada Research
www.kannadajournal.com

**ISSN: 2454–5813**
IJKR 2018; 4(4): 89-90
© 2018 IJKR
www.kannadajournal.com
Received: 18-08-2018
Accepted: 19-09-2018

**Lohit P**
Lecturer, Department of Kannada, Akshara Institute of Management Studies, Akshara Nagara, Channamumbapura, Savalanga Road, Shivamogga (D), Karnataka, State, India

**Correspondence**
**Lohit P**
Lecturer, Department of Kannada, Akshara Institute of Management Studies, Akshara Nagara, Channamumbapura, Savalanga Road, Shivamogga (D), Karnataka, State, India

# ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್

**Lohit P**

ದನಿ ಇಲ್ಲದವರಿಗೆ ದನಿ ಕೊಟ್ಟು ಅವರಲ್ಲಿ ಆತ್ಮಸ್ಥೈರ್ಯ ತುಂಬಿದ ಡಾ. ಅಂಬೇಡ್ಕರ್ ದಲಿತೋದ್ಧಾರಕ್ಕಾಗಿ ತಮ್ಮ ಶಕ್ತಿಯನ್ನೆಲ್ಲ ವಿನಿಯೋಗಿಸಿದವರು. ಅವರ ದೃಷ್ಟಿಯಲ್ಲಿ ದಲಿತೋದ್ಧಾರ ಕೇವಲ ಒಂದು ಜಾತಿ, ಕೋಮಿಗೆ ಸೀಮಿತಗೊಂಡದ್ದಲ್ಲ. ಸಮಾಜದ ಎಲ್ಲ ವರ್ಗಗಳಲ್ಲೂ ಇದ್ದುಕೊಂಡು, ಆಳುವವರ ತುಳಿತಕ್ಕೊಳಗಾಗಿ ಕತ್ತಲೆಯಿಂದ ಬೆಳಕಿಗೆ ಬರಲು ಹಾತೊರೆಯುತ್ತಿದ್ದ ಎಲ್ಲ ದಲಿತರಲ್ಲಿ ಬದುಕಬೇಕೆಂಬ ಆಸೆಯನ್ನು ಅಂಬೇಡ್ಕರ್ ಚಿಗುರಿಸಿದರು.

ಈ ಪ್ರಕಾರ ಅಂಬೇಡ್ಕರ್ ಜಗತ್ತಿನ ಎಲ್ಲ ದಲಿತರ ಆಶಾಕಿರಣವಾದರು. ಆಳುವವರನ್ನು ಕೇವಲ ಹಿಂಸಿಸುವುದರಿಂದ ಇಲ್ಲವೇ ಅವರನ್ನು ದ್ವೇಷಿಸುವುದರಿಂದ ದಲಿತರ ಸಂಕೋಲೆಗಳು ಕಳಚಿಹೋಗುವುದಿಲ್ಲ ಎಂಬುದನ್ನುರಿತಿದ್ದ ಈ ಧೀಮಂತ ನಾಯಕ ದಲಿತರಲ್ಲಿ ಆತ್ಮಾಭಿಮಾಗವನ್ನು, ಧೈರ್ಯವನ್ನು ತುಂಬಲು ಹೆಣಗಾಡಿದರು. ಬೇಡುವುದನ್ನು ಬಿಟ್ಟು, ಅರ್ಹತೆಯನ್ನು ಗಳಿಸಿಕೊಂಡು ಮೇಲೇರಬೇಕೆಂದು ಆಶಿಸಿದ ಅಂಬೇಡ್ಕರ್ ಜೀವನದುದ್ದಕ್ಕೂ ಸಮಾನತೆಗಾಗಿ, ಅರ್ಹತೆಗಾಗಿ ಹೋರಾಡಿದರು. ರಾಷ್ಟ್ರಪಿತ ಬಾಪೂಜಿ ಹಿಂಸೆಯ ವಿರುಧ್ಧ ಸಿದೆದ್ದು ಅಹಿಂಸಾ ಮಾರ್ಗದಲ್ಲಿ ಭಾರತೀಯರನ್ನು ಒಗ್ಗೂಡಿಸಿ ವಸಹತುಶಾಹಿಯ ವಿರುದ್ದ ಹೋರಾಡಿ ದೇಶವಾಸಿಗಳ ವಿಮೋಚನೆಗೆ ಕಾರಣಕರ್ತರಾದರು. ಭಾರತಾಂಬೆಯ ಪುತ್ರರತ್ನರಲ್ಲಿ ಒಬ್ಬರಾಗಿ, ಅನ್ಯಾಯ, ಶೋಷಣೆ, ಅಸ್ಪೃಶ್ಯತೆ ಮೊದಲಾದ ಸಾಮಾಜಿಕ ಅನಿಷ್ಟಗಳ ವಿರುಧ್ಧೆ ಘರ್ಜಿಸಿ ಜಯಗಳಿಸಿ ಭಾರತದಲ್ಲಿ ಪ್ರಜಾಪ್ರಭುತ್ವ ಭದ್ರವಾಗಿ ಉಳಿಯುವಂತೆ ಮಾಡುವಲ್ಲಿ ಅತ್ಯಂತ ಶ್ಲಾಘನೀಯ ಪಾತ್ರವಹಿಸಿದವರೇ ಡಾ. ಬಿ. ಆರ್. ಅಂಬೇಡ್ಕರ್.

ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಅಂಬಾವಾಡೆ ಎಂಬ ಹಳಿಯಲ್ಲಿ ರಾಮಜಿ ಎಂಬುವವರಿಗೆ ೧೪ನೇ ಮಗನಾಗಿ ೧೮೯೧ ಏಪ್ರಿಲ್ ೧೪ ರಂದು ಜನಿಸಿದರು. ಅವರ ಪೂರ್ಣ ಹೆಸರು ಭೀಮರಾವ್ ಅಂಬೇಡ್ಕರ್. ಬೇರುಬಿಟ್ಟಿದ್ದ ಮೇಲು–ಕೀಳೆಂಬ ಭೇದ ಭಾವದ ಪರಿಚಯ ಅವರಿಗಾಗಿ ತುಂಬಾ ನೊಂದುಕೊಂಡರು. ಭೀಮರಾವ್ ಅವರ ಶಾಲಾ ಉಪಾಧ್ಯಾಯರು ತಮ್ಮ ಕುಟುಂಬದ ಹೆಸರಾದ ಅಂಬೇಡ್ಕರ್‌ನ್ನು ಭೀಮರಾವ್‌ಗೆ ಇಟ್ಟು 'ನೀನು ಇನ್ನು ಮುಂದೆ ಭೀಮರಾವ್ ರಾಮ್‌ಜಿ ಅಂಬೇಡ್ಕರ್' ಎಂದು ಹೇಳಿದರು. ಅಂದಿನಿಂದ ಅಂಬಾವಾಡೆಕರ್ ಭೀಮರಾವ್ ಅಂಬೇಡ್ಕರ್ ಆದರು.

ಹಿಂದೂ ಧರ್ಮ ಯಾರನ್ನು ಹೀನಾಯವಾಗಿ ಕಂಡು ಅವರನ್ನು ಧರ್ಮ ಮತ್ತು ಸಮಾಜದಿಂದ ದೂರ ಇಟ್ಟಿತೋ ಅಂಥ ವರ್ಗದಿಂದಲೇ ಸಿಡಿದು ಬಂದವರು ಅಂಬೇಡ್ಕರ್. "ಹೆರಿಗೆಯ ಬೇನೆ ಹೆತ್ತವಳಿಗೆ ಗೊತ್ತು" ಎನ್ನುವ ಮಾತಿನಂತೆ ತನ್ನ ಜನಾಂಗದ ನೋವು, ಅಪಮಾನಗಳನ್ನು ಪ್ರಪಂಚಕ್ಕೆ ಪರಿಚಯಿಸುವುದರ ಮೂಲಕ ಮನುಷ್ಯ ಸಂಸ್ಕೃತಿಯನ್ನು ಮೆಟ್ಟಿ ನಿಂತವರು. ಆ ನಿಟ್ಟಿನಲ್ಲಿ ತನ್ನವರು ತಲೆ ಎತ್ತಿ ಬಾಳುವಂತೆ ಸ್ವಾಭಿಮಾನ ತುಂಬಿದವರು. ಆತ್ಮವಿಶ್ವಾಸವನ್ನು ಗಟ್ಟಿಗೊಳಿಸಿದರು. ಸ್ವಾಭಿಮಾನ ಸ್ವಾವಲಂಬನೆಯ ಒಟ್ಟು ಸಾಧನೆ ಡಾ. ಅಂಬೇಡ್ಕರ್ ಅವರ ಹೋರಾಟದ ಪೂರ್ಣ ಪ್ರಜ್ಞೆಯಾಗಿದೆ. ವಂಚಿತ ವರ್ಗವೊಂದಕ್ಕೆ ಜೀವ ತುಂಬುವ ಕೆಲಸ ಮಾಡಿದ್ದಾರೆ. ಸ್ವಶಕ್ತಿಯಲ್ಲಿ ಭರವಸೆ ಮೂಡಿ ಸ್ವತಂತ್ರ ಬದುಕನ್ನು ರುಪಿಸಿಕೊಳ್ಳುವ ಸಾಮರ್ಥ್ಯ ಕಲ್ಲಿಸಿಕೊಟ್ಟಿದ್ದಾರೆ.

ಸಮಾಜದ ಅತ್ಯಂತ ಕೆಳಸ್ತರದಲ್ಲಿ ಜನಿಸಿದ್ದ ಅಂಬೇಡ್ಕರ್ ವಿದ್ಯೆಯನ್ನು ಗಳಿಸಲು ಪಟ್ಟಪಾಡು ಹೇಳತೀರದು. ಮೇಲ್ವರ್ಗದವರ ಧಿಕ್ಕಾರ, ಅಪಮಾನಗಳ ಮಧ್ಯೆ ಅವರು ವಿದ್ಯೆ ಕಲಿತಿದ್ದರು. ಸಂಸ್ಕೃತವನ್ನು ಕಲಿಯಬೇಕೆಂಬ ಅವರ ಆಸೆಗೆ ಮೇಲ್ಜಾತಿಯವರು ನೀರೆರೆಚಿದ್ದರು. ಅಂಬೇಡ್ಕರ್‌ರಿಗೆ ವಿದ್ಯೆಯ ಮಹತ್ವವೇನು ಎಂಬುದರ ಅರಿವಿತ್ತು. ಶಿಕ್ಷಣವಿಲ್ಲದ ಮನುಷ್ಯ ಪ್ರಾಣಿಗೆ ಸಮ. ಅವನಲ್ಲಿ ಎಷ್ಟೇ ಸಾಮರ್ಥ್ಯವಿದ್ದರೂ ಪ್ರಯೋಜನಕ್ಕೆ ಬಾರದು ಎಂದು ಅವರು ಭಾವಿಸಿದ್ದರು. ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸ್ಥಾಪಿಸಿ ಭಾರತಕ್ಕೆ ತಕ್ಕುದಾದ ಸಂವಿಧಾನ ಮೂಡಿ ಬರುವಂತೆ ಮಾಡಲು ಅಹೋರಾತ್ರಿ ಶ್ರಮಿಸಿದರು. ಅದರ ಮೂಲಕ ಅಪಾರ ಕೀರ್ತಿಗಳಿಸಿ, ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವತಂತ್ರ್ಯಕ್ಕೆ ಬೆಲೆ ಇಲ್ಲ ಎಂಬುದನ್ನು ಪದೇ ಪದೇ ಒತ್ತಿ ಅಭ್ಯುದಯಕ್ಕಾಗಿ ಟೊಂಕ ಕಟ್ಟಿ ಹೋರಾಡಿದರು. ಅವರೊಬ್ಬ ಅಪ್ರತಿಮ ಸಾಮಾಜಿಕ ವ್ಯಕ್ತಿ,

ವಿದ್ವಾಂಸ, ಪುಸ್ತಕ ಪ್ರೇಮಿ ಇವೆಲ್ಲಕ್ಕೂ ಮಿಗಿಲಾಗಿ ರಾಷ್ಟ್ರದ ಅಗ್ರಗಣ್ಯ ನಾಯಕರಲ್ಲಿ ಒಬ್ಬರಾಗಿ ದುಡಿದ ಅಂಬೇಡ್ಕರ್ ಅವರ ಪ್ರಯತ್ನದ ಫಲವಾಗಿ ದಲಿತರಲ್ಲಿ ಗಣನೀಯ ಬದಲಾವಣೆ ಬಂದಿದೆ. ಅಂಬೇಡ್ಕರ್ ಅವರ ಹಾದಿಯಲ್ಲಿ ನಡೆದು ಉದಾರ ಹಾಗೂ ವಿಶಾಲ ಮನಸ್ಸಿನಿಂದ ಎಲ್ಲರೂ ದುಡಿದದ್ದೇ ಆ ಸಮುದಾಯ ಉದ್ಧಾರವಾಗಲು ಸಾಧ್ಯವಿದೆ.

ನಾವೆಲ್ಲರೂ ಎಲ್ಲಿಯವರೆಗೆ ಉದಾರತೆಯನ್ನು ತೋರುವುದಿಲ್ಲವೋ ಅಲ್ಲಿಯವರೆಗೆ ಅಂಬೇಡ್ಕರ್ ಕಂಡ ಕನಸು ನನಸಾಗಲಾರದು. ನಾವು ಯಾರ ಶ್ರಮದಿಂದ ಏನನ್ನು ಪಡೆದಿದ್ದೇವೆ, ಅದನ್ನು ಸಮುದಾಯಕ್ಕೆ ಮರಳಿ ಕೊಡುವುದರ ಮೂಲಕ ಹೆಚ್ಚಿನದನ್ನು ಪಡೆಯುತ್ತೇವೆ. ವಿದ್ಯಾವಂತರು, ಪ್ರಜ್ಞಾವಂತರಾದ ಸಮಾಜಕ್ಕೆ ಮರಳಿ ನಾವು ಕೊಡುವುದರ ಮೂಲಕ ಉಳಿದವರನ್ನು ಮೇಲೆತ್ತುವಲ್ಲಿ ನಮ್ಮ ಹೃದಯ ವೈಶಾಲ್ಯತೆ ಮೆರೆಯಬೇಕಾಗಿದೆ. ಅಂತಹ ಹೃದಯ ವೈಶಾಲ್ಯತೆ ಮೆರೆದವರು ಅಂಬೇಡ್ಕರ್.

ನಿಮ್ನವರ್ಗದವರಲ್ಲಿ ಮಾನವೀಯ ಘನತೆಯ ಭಾವವನ್ನು, ಸ್ವಾಭಿಮಾನವನ್ನು, ಕುದುರಿಸುವುದು ಅಂಬೇಡ್ಕರರ ಜೀವನ ಧ್ಯೇಯವಾಗಿತ್ತು. ಯಾರು ಬೇಕಾದರೂ ತುಳಿಯಬಹುದಾದ ಮಣ್ಣಿನ ಮುದ್ದೆಗಳನ್ನು ಮನುಷ್ಯರನ್ನಾಗಿಸಬೇಕಾಗಿತ್ತು. ಹಾಗೆಯೇ ಅವರು ತಮ್ಮ ಕಾಲಮೇಲೆ ತಾವು ನಿಲ್ಲಬೇಕು, ಸ್ವಂತದ ಬುದ್ಧಿಯನ್ನು ಉಪಯೋಗಿಸಬೇಕು. ವಿದ್ಯಾರ್ಜನೆಯಲ್ಲಿ, ಪರಿಶ್ರಮದಲ್ಲಿ, ಸಾಮಾಜಿಕ ದೃಷ್ಟಿಯನ್ನು ಬೆಳಯಿಸಿಕೊಳ್ಳುವುದರಲ್ಲಿ, ರಾನಡೆ, ಗೋಖಲೆ, ಟಿಳಕರಂಥವರನ್ನು ಮೇಲ್ಪಂಕ್ತಿಯಾಗಿಸಿಕೊಳ್ಳಬೇಕು ಎಂದು ಯುವಕರಿಗೆ ಉಪದೇಶ ಹೇಳುತ್ತಿದ್ದರು. ತನ್ನ ಮಗುವಿಗೆ ಅತಿಮಾನವ ಸಾಮರ್ಥ್ಯ ಬರಬೇಕೆಂದು ಗ್ರೀಕ್ ದೇವತೆ ಡಿಮಿಟರ್ ಅದನ್ನು ನಿತ್ಯ್ವಾ ಬೆಂಕಿಯಲ್ಲಿ ಹಿಡಿಯುತ್ತಿದ್ದಳೆಂಬ ಕಥೆಯನ್ನು ಅವರು ಮತ್ತೆ ಮತ್ತೆ ಹೇಳುತ್ತಿದ್ದರು. ಗುರಿಯೊಂದನ್ನಿರಿಸಿಕೊಳ್ಳದವ ದಾರಿಗೆಡುತ್ತಾನೆ. ಹಿರಿಯ ಗುರಿಯನ್ನಿರಿಸಿಕೊಂಡು ಅದಕ್ಕಾಗಿ ನಿಷ್ಠೆಯಿಂದ ದುಡಿದವ ತನ್ನ ಹಿತವನ್ನಲ್ಲದೆ ತನ್ನ ಸಮಾಜದ ಹಿತವನ್ನೂ ಸಾಧಿಸಬಲ್ಲವನಾಗುತ್ತಾನೆ ಎನ್ನುವುದನ್ನು ತಮ್ಮ ಬಧುಕಿನ ಮೂಲಕವೇ ಅಂಬೇಡ್ಕರರು ತೋರಿಸಿಕೊಟ್ಟರು.

೧೯೪೮ರ ನವೆಂಬರ ೪ರಂದು ಸಂವಿಧನ ಸಭೆಯಲ್ಲಿ ಅಂಬೇಡ್ಕರರು ಅಧಿಕೃತವಾಗಿ ಸಂವಿಧಾನದ ಕರಡನ್ನು ಮಂಡಿಸಿದರು. ಆ ಸಂದರ್ಭದಲ್ಲಿ ಅವರು ಮಾಡಿದ ಭಾಷಣವೂ ಮಂಡಿಸಿದ ವಾದಸರಣಿಯೂ ಪಾಂಡಿತ್ಯದ ಮತ್ತು ಬೌದ್ಧಿಕ ನಿಶಿತತೆಯ ಸ್ಮರಣೀಯ ನಿದರ್ಶನವೆನ್ನಬಹುದು. ಕೆಲವಾರು ಅಂಶಗಳಲ್ಲಿ ಅಮೆರಿಕದ ಸಂವಿಧಾನಕ್ಕಿಂತ ಭಾರತದ ಸೂಚಿತ ಸಂವಿಧಾನ ಹೆಚ್ಚು ಸುಧಾರಿತ ಎಂದು ಅಂಬೇಡ್ಕರ್ ವಿವರಿಸಿದರು. ೧೯೩೫ರ ಗವರ್ನ್ಮೆಂಟ್ ಆಫ್ ಇಂಡಿಯಾ ಆ್ಯಕ್ಟಿನ ಗಣನೀಯ ಭಾಗವನ್ನು ಹೊಸ ಕರಡಿನಲ್ಲಿಯೂ ಉಳಿಸಿಕೊಂಡಿರುವುದನ್ನು ತಿಳಿಸಿ, ಭಾರತದ ವಿಶೇಷ ಸಂದರ್ಭದಲ್ಲಿ ಅಗತ್ಯವಾದ ವ್ಯತ್ಯಾಸಗಳನ್ನು ಅಳವಡಿಸಿರುವುದೇ ತಮ್ಮ ಮುಖ್ಯ ಪ್ರಯತ್ನವೆಂದರು. ತಮ್ಮ ಮಂಡನೆಯ ಸಮಾಪನದಲ್ಲಿ ಅಂಬೇಡ್ಕರ್ ಹೇಳಿದ ಮಾತುಗಳು ಸ್ಮರಣಿಯ.

ಈ ಸಂವಿಧಾನ ಕಾರ್ಯಾನ್ವಯವಾಗಬಲ್ಲದೆಂದು ನನಗೆ ಭರವಸೆಯಿದೆ. ಅಗತ್ಯವಾದ ಸುಧಾರಣೆಗಳಿಗೆ ಅವಕಾಶವನ್ನು ಇದರಲ್ಲಿ ಉಳಿಸಿಕೊಳ್ಳಲಾಗಿದೆ, ಹಾಗೆಂದು ಇದು ಒಂದು ದುರ್ಬಲ ರಚನೆಯಲ್ಲ. ಶಾಂತಿಯಲ್ಲಾಗಲಿ ಯುದ್ಧಸಮಯದಲ್ಲಾಗಲಿ ಇಡೀ ದೇಶವನ್ನು ಏಕಸೂತ್ರದಲ್ಲಿ ಹಿಡಿದಿಡಬಲ್ಲ ಸಾಮರ್ಥ್ಯ ಈ ಸಂವಿಧಾನಕ್ಕೆ ಇದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗೆ ನಾನು ಹೇಳಬಹುದಾದರೆ ಹೊಸ ಸಂವಿಧಾನ ಜಾರಿಯಾದ ಮೇಲೆ ದೇಶದಲ್ಲಿ ಏನಾದರೂ ಬಿಕ್ಕಟ್ಟುಗಳುಂಟಾದರೆ ಅದು ಸಂವಿಧಾನದ ದೋಷವಾಗದು, ಮನುಷ್ಯನ ಸಂಕುಚಿತ ಪ್ರವೃತ್ತಿಯ ಪರಿಣಾಮವಷ್ಟೆ.

**ಗ್ರಂಥ ಋಣ**

೧. ಅಂಬೇಡ್ಕರ್ – ಸಂಪಾದಕರು ಜಿ.ಎಂ. ಕೃಷ್ಣಮೂರ್ತಿ.
೨. ಡಾ. ಅಂಬೇಡ್ಕರ್ ವ್ಯಕ್ತಿ ಮತ್ತು ವಿಚಾರ – ಸಂಪಾದಕರು ವಿ.ಎಂ. ಇನಾಂದಾರ್.
3. ಸಮಾಜ–ಚಿಕಿತ್ಸಕ ಅಂಬೇಡ್ಕರ್ – ಸಂಪದಕರು ಚಂದ್ರಶೇಖರ ಭಂಡಾರಿ.